**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1123/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಚೈತನ್ಯ ಎ | ಪ್ರಾಸಾ-4 |
| ತಂದೆಯ ಹೆಸರು | : ಮಲ್ಲೇಶ್ವರ್ | ಚಾಸಾ-4 |
| ವಯಸ್ಸು | : 29 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಆಪರೇಶನ್ ಎಕ್ಸಿಕ್ಯೂಟಿವ್ | ದಿನಾಂಕಃ 06.01.2026. |
| ವಾಸಸ್ಥಳ | : ಚಿಕ್ಕಮಗಳೂರು | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-1 ರವರ ಪರಿಚಯ ನನಗಿದೆ.

ಕಳೆದ 2 ವರ್ಷಗಳ ಹಿಂದೆ ಚಾಸಾ-1 ರವರು ನಮ್ಮ ಫೈನಾನ್ಸ್ ಕಂಪನಿಗೆ ಸಾಲವನ್ನು ಪಡೆಯಲು ಬಂದಿರುತ್ತಾರೆ. ನಮ್ಮ ಕಂಪನಿಯ ನಿಯಮದ ಪ್ರಕಾರ ಸಾಲವನ್ನು ನೀಡುವ ಪೂರ್ವದಲ್ಲಿ ಅವರ ಆಧಾರ್ ವಿಳಾಸದಲ್ಲಿ ಒಂದು ಫೋಟೋವನ್ನು ತೆಗೆದುಕೊಳ್ಳುವ ನಿಯಮವಿದ್ದು, ಅದರ ಬಾಬ್ತು ನಾನು ಚಾಸಾ-1 ರವರು ಮನೆಯ ಬಳಿ ತೆರಳಿರುತ್ತೇನೆ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಚಾಸಾ-1 ರವರು ಮತ್ತು ಇತರರು ಯಾವುದೋ ವಿಷಯದ ಬಗ್ಗೆ ಮಾತು ಕತೆ ಮಾಡಿಕೊಳ್ಳುತ್ತಿದ್ದರು ನಾನು ಅವರ ಬಳಿ ಏನು ಕೇಳಿರುವುದಿಲ್ಲ. ನಂತರ ಫೋಟೋವನ್ನು ತೆಗೆಯದೇ ಹಿಂತಿರುಗಿರುತ್ತೇನೆ. ಇದನ್ನು ಹೊರತು ಪಡಿಸಿ ನನಗೆ ಇನ್ನೇನನ್ನು ನೋಡಿರುವುದಿಲ್ಲ. ನಂತರದಲ್ಲಿ ಪ್ರಕರಣದ ಕುರಿತು ನಾನು ಯಾವುದೇ ವಿಚಾರವನ್ನು ತಿಳಿದುಕೊಂಡಿರುವುದಿಲ್ಲ.

ಸಾಕ್ಷಿಯು ದಿ.02.04.2024 ರಂದು ಬಣಕಲ್ ಪೋಲಿಸ್ ಠಾಣೆಗೆ ನೀಡಿದ ಮರು ಉತ್ತರದ ಪ್ರತಿಯನ್ನು ನೋಡಿ ಗುರುಸಿದ್ದು, ಸದರಿ ಪ್ರತಿಯನ್ನು ನಿಪಿ-6 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.28.11.2023 ರಂದು ನಾನು ಮ.3.30 ರ ಸಮಯಕ್ಕೆ ಚಾಸಾ-1 ರವರ ಮನೆಯ ಬಳಿ ಹೋಗಿರುತ್ತೇನೆ ಎಂದರೆ ಸಾಕ್ಷಿಯು ದಿನಾಂಕ ನೆನಪಿರುವುದಿಲ್ಲ ಆದರೆ ಫೋಟೋವನ್ನು ತೆಗೆಯಲು ಅವರ ಮನೆಯ ಬಳಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ ಆರೋಪಿಯು ಚಾಸಾ-1 ರವರಿಗೆ ಮನೆಯ ಫೋಟೋವನ್ನು ತೆಗೆಯದಂತೆ ಹೇಳಿ ಮತ್ತು ಗೇಟ್ ನ ಒಳಗೆ ಹೋಗದಂತೆ ತಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಆರೋಪಿಯು

ನಾನು ನ್ಯಾಯಾಲಯದಿಂದ ನಿರ್ಭಂದಕಾಜ್ಞೆ ಆದೇಶವನ್ನು ತಂದಿರುವುದಾಗಿ ತಿಳಿಸಿ ನೀವು ಯಾರು ಮನೆಯ ಒಳಗೆ ಬರುವಂತಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿಯು ಮನೆಯೊಳಗಿಂದ ಒಂದು ಕತ್ತಿಯನ್ನು ತಂದು ಚಾಸಾ-1 ರವರಿಗೆ ಜೀವ ಬೆದರಿಕೆ ಹಾಕಿ ಅವಾಚ್ಯ ಶಬ್ದದಿಂದ ನಿಂದಿಸಿ, ಕತ್ತಿಯನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಚಾಸಾ-2 ರವರಿಗೂ ಆರೋಪಿಯು ಕತ್ತಿಯನ್ನು ತೋರಿಸಿ ಜೀವ ಬೆದರಿಕೆಯನ್ನು ಹಾಕಿರುವುದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಆರೋಪಿಯು ಚಾಸಾ-1 ರವರನ್ನು ಕಾಲಿನಿಂದ ಒದ್ದು, ಕೈನಿಂದ ತಲೆಗೆ ಒಡೆದು ಬಿಡಿಸಲು ಬಂದ ಚಾಸಾ-2 ರವರಿಗೂ ಕೂಡ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಗಳದಲ್ಲಿ ಚಾಸಾ-1 ರವರಿಗೆ ಕತ್ತಿಯು ತಾಕಿ ಎಡಭಾಗದ ಭುಜಕ್ಕೆ ಮತ್ತು ಎದೆಯ ಭಾಗಕ್ಕೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ.

ನಂತರ ಚಾಸಾ-3 ರವರು ಜಗಳವನ್ನು ಬಿಡಿಸಿ ಚಾಸಾ-1 ಮತ್ತು 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ವಿಷಯ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಇದನ್ನು ಕುರಿತು ಚಾಸಾ-1 ರವರು ಬಣಕಲ್ ಠಾಣೆಯಲ್ಲಿ ದೂರನ್ನು ದಾಖಲಿಸಿರುವ ಬಗ್ಗೆಯೂ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-6 ನ್ನು ಬಣಕಲ್ ಪೋಲಿಸ್ ಠಾಣೆಯವರು ಚಾಸಾ-1 ರವರು ಸಾಲ ಕೇಳಿರುವ ಕುರಿತು ದಾಖಲಾತಿಯನ್ನು ಕೋರಿದ ಮೇರೆಗೆ ನೀಡಿರುತ್ತೇನೆ. ಸದರಿ ದೂರಿನ ಸಂಭಂದ ಪೋಲಿಸರು ದಿ.09.05.2024 ರಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ದಿ.09.05.2024 ರ ತನ್ನ ಹೇಳಿಕೆಯನ್ನು ಸಂಪೂರ್ಣವಾಗಿ ಅಲ್ಲಗಳೆದ ಕಾರಣ ಸದರಿ ಹೇಳಿಕೆಯ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಎಂ.ಒ.1 ನ್ನು ಬಳಸಿ ಆರೋಪಿಯು ಚಾಸಾ-1 ಮತ್ತು 2 ರವರಿಗೆ ಹಲ್ಲೆ ಮಾಡಲು ಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ನಿಪಿ-6 ನ್ನು ಪೋಲಿಸರು ಯಾವ ವಿಷಯದ ಕುರಿತು ಮನವಿ ಮಾಡಿಕೊಂಡಿರುತ್ತಾರೆ ಎಂಬ ಮಾಹಿತಿ ನನಗಿರುವುದಿಲ್ಲ, ಕೇವಲ ಅವರ ಕೋರಿಕೆಯ ಮೇರೆಗೆ ನೀಡಿರುತ್ತೇನೆ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1123/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಸುವರ್ಣ | ಪ್ರಾಸಾ-5 |
| ಗಂಡನ ಹೆಸರು | : ಪುಟ್ಟಸ್ವಾಮಿ | ಚಾಸಾ-5 |
| ವಯಸ್ಸು | : 45 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಗೃಹಿಣಿ | ದಿನಾಂಕಃ 06.01.2026. |
| ವಾಸಸ್ಥಳ | : ಬಣಕಲ್ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಚಾಸಾ-1 ಮತ್ತು 6 ರವರ ಪರಿಚಯ ನನಗಿದೆ.

ಸಾಕ್ಷಿಯು ನಿಪಿ-2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ಮತ್ತು 4 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಎಂ.ಒ.1 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಎಂ.ಒ.1(ಎ) ಎಂದು ಗುರುತಿಸಲಾಯಿತು.

ದಿ.29.11.2023 ರಂದು ಸ.5.00 ರಿಂದ 6.00 ರ ಸಮಯದಲ್ಲಿ ಚಾಸಾ-2 ರವರ ಮನೆಯ ಮುಂದೆ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ನಾನು ಆ ದಿನ ಚಾಸಾ-2 ರವರು ಪಕ್ಕದ ಮನೆಗೆ ಹೋಗಿದ್ದ ಸಮಯದಲ್ಲಿ ಚಾಸಾ-2 ರವರ ಮನೆಯ ಬಳಿ ಮಹಜರ್ ಕ್ರಮ ಜರುಗಿಸಲಾಗುತ್ತಿತ್ತು. ಸದರಿ ಸಮಯದಲ್ಲಿ ನಾನು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ಆರೋಪಿ ಮತ್ತು ಚಾಸಾ-1 ರವರ ಮಧ್ಯೆ ಗಲಾಟೆಯಾಗಿರುವ ಸಂಬಂಧ ಸಹಿ ಮಾಡಿರುತ್ತೇನೆ. ಸದರಿ ಸಮಯದಲ್ಲಿ ಪೋಲಿಸರು ಮಹಜರ್ ನ್ನು ಬರವಣಿಗೆ ಮಾಡಿ ಕತ್ತಿಯನ್ನು ವಶಕ್ಕೆ ಪಡೆದು ಮತ್ತು ಫೋಟೋವನ್ನು ತೆಗೆದಿರುತ್ತಾರೆ. ಆ ದಿನ ನನ್ನೊಟ್ಟಿಗೆ ಚಾಸಾ-6 ಮತ್ತು 3 ರವರು ಸಹಿ ಮಾಡಿರುತ್ತೇವೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ನ್ನು ನೋಡಿ ಆ ದಿನ ಪೋಲಿಸರು ವಶಕ್ಕೆ ಪಡೆದ ಕತ್ತಿ ಇದೆ ಎಂದು ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ಚಾಸಾ-1 ನನ್ನ ತಂಗಿ ಎಂದರೆ ಸರಿ. ಚಾಸಾ-2 ನನ್ನ ತಂದೆ. ಚಾಸಾ-3 ನನ್ನ ತಂಗಿಯ ಗಂಡ ಎಂದರೆ ಸರಿ. ಚಾಸಾ-1 ರವರು ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ವಿಭಾಗವನ್ನು ಕೋರಿ ಒಂದು ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಪಕ್ಷಗಾರಳಾಗಿರುತ್ತೇನೆ ಎಂದರೆ ಸರಿ. ಈ ದಿನ ನ್ಯಾಯಾಲಯಕ್ಕೆ ನನ್ನೊಟ್ಟಿಗೆ ಚಾಸಾ-1 ಮತ್ತು 3 ರವರ ಬಂದಿರುತ್ತಾರೆ ಎಂದರೆ ಸರಿ. ದಿ.29.11.2023 ರಂದು ಸ.4.00 ರ ಸಮಯಕ್ಕೆ ಚಾಸಾ-2 ರವರು ಪಕ್ಕದ ಮನೆಯವರಾದ ಶಿವಪ್ಪಾಚಾರ್ ರವರ ಮನೆಗೆ ಹೋಗಿರುತ್ತೇನೆ. ಸದರಿಯವರು

ನನ್ನ ಸಂಬಂಧಿಕರಾಗಿರುತ್ತಾರೆ. ಶಿವಪ್ಪಾಚಾರ್ ರವರ ಮನೆಗೆ ಹೋಗುವ ಪೂರ್ವದಲ್ಲಿ ನಾನು ಚಾಸಾ-2 ರವರ ಮನೆಗೆ ಹೋಗಿರುವುದಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಮಾತು ಕಥೆ ಇರುವುದಿಲ್ಲ ಎಂದರೆ ಸರಿ. ಕಳೆದ 1½ ವರ್ಷದಿಂದ ನನ್ನ ಮತ್ತು ಆರೋಪಿಯ ನಡುವೆ ಮಾತು ಕಥೆ ಇರುವುದಿಲ್ಲ. 2023 ನೇ ಸಾಲಿನಲ್ಲಿ ನನ್ನ ಮತ್ತು ಆರೋಪಿಯ ನಡುವೆ ವೈಮನಸ್ಸಿತ್ತು ಎಂದರೆ ಸರಿ. ನಾನು ಸ್ಥಳಕ್ಕೆ ಹೋದ ನಂತರದಲ್ಲಿ ಪೋಲಿಸರು ಬರವಣಿಗೆ ಮಾಡಿರುತ್ತಾರೆ. ನಾನು ಸ.5.00 ರ ಸಮಯಕ್ಕೆ ಸ್ಥಳಕ್ಕೆ ಹೋಗಿರುತ್ತೇನೆ.

ನಾನು ಶಿವಪ್ಪಾಚಾರ್ ರವರ ಮನೆಯಲ್ಲಿರುವಾಗ ಸ.5.00 ರ ಸಮಯದಲ್ಲಿ ಪೋಲಿಸರು ನನ್ನನ್ನು ಮಹಜರ್ ಗೆ ಎಂದು ಕರೆದಿರುತ್ತಾರೆ. ಸದರಿ ಪೋಲಿಸರ ಹೆಸರು ನನಗೆ ತಿಳಿದಿರುವುದಿಲ್ಲ. ಆಗ ನನ್ನೊಟ್ಟಿಗೆ ಶಿವಪ್ಪಾಚಾರ್ ರವರ ಮನೆಯವರು ಯಾರು ಬಂದಿರುವುದಿಲ್ಲ. ಶಿವಪ್ಪಾಚಾರ್ ರವರ ಮನೆಯಿಂದ ಚಾಸಾ-2 ರವರ ಮನೆಗೆ 20 ಮೀಟರ್ ಅಂತರವಿರುತ್ತದೆ. ಚಾಸಾ-2 ರವರ ಮನೆಯ ಪೂರ್ವದಿಕ್ಕಿಗೆ ಶಿವಪ್ಪಾಚಾರ್ ರವರ ಮನೆ ಬರುತ್ತದೆ.  ನಿಪಿ-2 6 ಪುಟಗಳಿಂದ ಕೂಡಿರುತ್ತದೆ. ಕೇವಲ ಎರಡು ಪುಟಕ್ಕೆ ಮಾತ್ರ ಪೋಲಿಸರು ಸಹಿಯನ್ನು ಪಡೆದಿರುತ್ತಾರೆ. ಖಚಿತವಾಗಿ ಎಷ್ಟನೇ ಪುಟದಲ್ಲಿ ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ಸದರಿ ಮಹಜರ್ ನ ಬರವಣಿಗೆ ಮಾಡಿದ ಪೋಲಿಸರ ಹೆಸರು ನನಗೆ ತಿಳಿದಿರುವುದಿಲ್ಲ. ನಿಪಿ-2 ರಲ್ಲಿ ಬರೆದಂತಹ ಚೆಕ್ಕುಬಂದಿಯು ಪೂರ್ವಕ್ಕೆ ಚಾಸಾ-2 ರವರ ಮನೆ, ದಕ್ಷಿಣಕ್ಕೆ ಜಾನಯ್ಯ ರವರ ತೋಟ, ಪಶ್ಚಿಮಕ್ಕೆ ಶಿವಪ್ಪಾಚಾರ್ ರವರ ಮನೆ ಮತ್ತು ಉತ್ತರಕ್ಕೆ ಪಂಚಾಯ್ತಿ ರಸ್ತೆ ಇರುತ್ತದೆ. ನಾನು ಮೇಲೆ ತಿಳಿಸಿದ ಚೆಕ್ಕುಬಂದಿಯನ್ನು ಹೊರತುಪಡಿಸಿ ಇತರೆ ಚೆಕ್ಕುಬಂದಿಗೆ ಸಂಬಂಧಿಸಿದ ಮಹಜರ್ ಪ್ರತಿಗೆ ನಾನು ಸಹಿ ಮಾಡಿರುವುದಿಲ್ಲ. ಸದರಿ ಸಹಿಯನ್ನು ಸ.5.30 ರಿಂದ 5.45 ರಲ್ಲಿ ಮಾಡಿರಬಹುದು.

ನಿಪಿ-3 ಮತ್ತು 4 ನ್ನು ತೆಗೆದ ಪೋಲಿಸರ ಹೆಸರು ನನಗೆ ನೆನಪಿರುವುದಿಲ್ಲ. ಅದೇ ಸಮಯದಲ್ಲಿ ನಿಪಿ-3 ಮತ್ತು 4 ನ್ನು ತೆಗೆಯಲಾಗಿರುತ್ತದೆ. ನಿಪಿ-3 ಮತ್ತು 4 ನ್ನು ಪೋಲಿಸರು ತಮ್ಮದೇ ಮೊಬೈಲ್ ನಲ್ಲಿ ತೆಗೆದಿರುತ್ತಾರೆ. ಆ ದಿನ ಎರಡು ಫೋಟೋಗಳನ್ನು ತೆಗೆಯಲಾಗಿರುತ್ತದೆ. ನಿಪಿ-3 ಮತ್ತು 4 ನ್ನು ತೆಗೆಯುವಾಗ ಎಂ.ಒ.1 ನ್ನು ಚಾಸಾ-1 ರವರು ತಂದುಕೊಟ್ಟಿರುತ್ತಾರೆ. ಸದರಿ ಕತ್ತಿಯನ್ನು ಚಾಸಾ-1 ರವರು ಜಾನಯ್ಯ ರವರ ತೋಟದಿಂದ ತಂದು ಕೊಟ್ಟಿರುತ್ತಾರೆ. ಜಾನಯ್ಯ ರವರ ತೋಟದಿಂದ ಕತ್ತಿಯನ್ನು ವಶಪಡಿಸಿಕೊಳ್ಳುವಾಗ ಯಾವುದೇ ಫೋಟೋವನ್ನು ತೆಗೆದಿರುವುದಿಲ್ಲ. ನಾನು ಖಾಲಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.  ನಾನು ಚೆಕ್ಕುಬಂದಿ ಬರೆದಂತಹ ಎಂ.ಒ.1 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಸಹಿ ಮಾಡಿರುತ್ತೇನೆ. ನನ್ನೊಟ್ಟಿಗೆ ಯಾರು ಸಹಿ ಮಾಡಿರುತ್ತಾರೆ ಎಂದು ನಿಖರವಾಗಿ ತಿಳಿದಿರುವುದಿಲ್ಲ. ಸದರಿ ಸಹಿಯನ್ನು ಸ.5.30 ರಿಂದ 5.45 ರ ಸಮಯದಲ್ಲಿ ಮಾಡಿರುತ್ತೇನೆ. ನಾನು ಸ್ಥಳಕ್ಕೆ ಹೋಗುವ ಪೂರ್ವದಲ್ಲಿಯೇ ಚಾಸಾ-6 ರವರು ಸ್ಥಳದಲ್ಲಿ ಇದ್ದರು. ಆ ದಿನ ಚಾಸಾ-4 ರವರು ಸ್ಥಳದಲ್ಲಿಯೇ ಇದ್ದರು. ಚಾಸಾ-2 ರವರು ಹಿಂದಿನಿಂದಲು ಕುಲುಮೆ ಕೆಲಸ ಮಾಡಿಕೊಂಡು ಬಂದಿರುತ್ತಾರೆಸಿ.

ಚಾಸಾ-2 ರವರು ಎಂ.ಒ.1 ರಂತಹ ಕತ್ತಿಗಳು ಮಾಡುತ್ತಾರೆ ಎಂದರೆ ಸರಿ. ಸದರಿ ಕುಲುಮೆ

ಕತ್ತಿಯನ್ನು ಬಳಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಲಾಗಿರುತ್ತದೆ ಎಂಬುದರ ಬಗ್ಗೆ ನನಗೆ ತಿಳಿದಿರುವುದಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ತಿಳಿಯದಿದ್ದರೂ ಸಹಾ ಅಸಲು ದಾವೆಯನ್ನು ಹೂಡಿರುವ ಬಾಬ್ತು ಅದಕ್ಕೆ ಸಹಾಯವಾಗಲಿ ಎಂದು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನಾನಾಗಿಯೇ ಸಾಕ್ಷಿಯನ್ನು ನುಡಿಯಲು ನ್ಯಾಯಾಲಯಕ್ಕೆ ಬಂದಿರುತ್ತೇನೆ. ನನ್ನ ಮತ್ತು ಚಾಸಾ-1 ರವರ ಮಧ್ಯೆ ಒಳ್ಳೆ ಭಾಂದವ್ಯವಿರುತ್ತದೆ ಎಂದರೆ ಸರಿ. ಆದ ಕಾರಣ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**<u>1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**

**<u>ಸಿ.ಸಿ.1123/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಸಂತೋಷ್ | ಪ್ರಾಸಾ-6 |
| ತಂದೆಯ ಹೆಸರು | : ನಾರಾಯಣ | ಚಾಸಾ-6 |
| ವಯಸ್ಸು | : 28 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 06.01.2026. |
| ವಾಸಸ್ಥಳ | : ಗೋಣೀಬೀಡು | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-1 ಮತ್ತು 5 ರವರ ಪರಿಚಯ ನನಗಿಲ್ಲ.

ಸಾಕ್ಷಿಯು ನಿಪಿ-2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ಮತ್ತು 4 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.1 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಎಂ.ಒ.1(ಬಿ) ಎಂದು ಗುರುತಿಸಲಾಯಿತು.

ದಿ.29.11.2023 ರಂದು ಸ.5.00 ರಿಂದ 6.00 ರ ಸಮಯದಲ್ಲಿ ಚಾಸಾ-2 ರವರ ಮನೆಯ ಬಳಿ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ನಾನು ಸದರಿ ಸಹಿಯನ್ನು ಪೋಲಿಸರ ಕೋರಿಕೆಯ ಮೇರೆಗೆ ಮಾಡಿರುತ್ತೇನೆ. ನಿಪಿ-2 ರಲ್ಲಿ ಏನನ್ನು ಬರೆಯಲಾಗಿದೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ ಮತ್ತು ಪೋಲಿಸರು ನನಗೆ ಓದಿ ತಿಳಿಸಿರುವುದಿಲ್ಲ. ಆ ದಿನ ಪೋಲಿಸರು ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ ಚಾಸಾ-5 ರವರು ಎಂ.ಒ.1 ನ್ನು ಹಿಡಿದುಕೊಂಡಿರುತ್ತಾರೆ. ಅದೇ ಸಮಯದಲ್ಲಿ ಒಂದು ಫೋಟೋವನ್ನು ತೆಗೆದಿರುತ್ತಾರೆ. ನಿಪಿ-2 ಕ್ಕೆ ನಾನು ಮತ್ತು ಚಾಸಾ-5 ರವರು ಸಹಿ ಮಾಡಿರುತ್ತೇವೆ. ಸದರಿ ಮಹಜರ್ ಕ್ರಮವನ್ನು ಯಾವ ವಿಷಯದ ಕುರಿತು ಬರೆಯಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ದಿ.29.11.2023 ರಂದು ಚಾಸಾ-1 ಮತ್ತು ಆರೋಪಿಯ ನಡುವೆ ಗಲಾಟೆಯಾದ ಕುರಿತು ನಾನು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಆ ದಿನ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಪೋಲಿಸರು ನಿಪಿ-2 ನ್ನು ಬರೆದಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ಚಾಸಾ-1 ರವರು ಎಂ.ಒ.1 ರಿಂದ ಆರೋಪಿಯು ಅವರಿಗೆ ಹಲ್ಲೆ ಮಾಡಿರುವುದನ್ನು ತಿಳಿಸಿದ ಮೇರೆಗೆ

ಪೋಲಿಸರು ನನ್ನ ಸಮಕ್ಷಮ ಎಂ.ಒ.1 ನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ</u>**

ನಿಪಿ-2 ರಲ್ಲಿ ಏನನ್ನು ಬರವಣಿಗೆ ಮಾಡಲಾಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಪೋಲಿಸರ ಕೋರಿಕೆಯ ಮೇರೆಗೆ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಮತ್ತು ಚಾಸಾ-3 ರವರು ಒಂದೇ ಊರಿನ ನಿವಾಸಿಗಳು ಎಂದರೆ ಸರಿ. ನಾನು ಮತ್ತು ಚಾಸಾ-3 ರವರು ದಿ.29.11.2023 ರಂದು ಜೊತೆಯಾಗಿ ಒಟ್ಟಿಗೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ನಾನು ಆ ದಿನ ಪಲ್ಗುಣಿಯಲ್ಲಿರುವ ನನ್ನ ಸ್ನೇಹಿತನನ್ನು ಭೇಟಿ ಮಾಡಿ ಹಿಂತಿರುಗಿ ಬರುವಾಗ ರಸ್ತೆಯಲ್ಲಿ ಸಹಿ ಮಾಡಿರುತ್ತೇನೆ. ನಾನು ಆ ದಿನ ನನ್ನ ಸ್ನೇಹಿತನಾದ ರಿಜ್ವಾನ್ ಎಂಬುವವರ ಮನೆಯಲ್ಲಿ ಸ.5.00 ರ ವರೆಗೂ ಇರುತ್ತೇನೆ. ನಾನು ಸದರಿಯವರ ಮನೆಗೆ ವಾಹನದಲ್ಲಿ ಹೋಗಿರುತ್ತೇನೆ. ಆ ದಿನ ರಿಜ್ವಾನ್ ರವರ ಮನೆಗೆ ಸ.5.00 ಸಮಯಕ್ಕೆ ಹೋಗಿರುತ್ತೇನೆ. ಅವರು ಮನೆಯಲ್ಲಿ 10 ನಿಮಿಷಗಳ ಕಾಲ ಇರುತ್ತೇನೆ. ರಿಜ್ವಾನ್ ಎಂಬುವವರ ಮನೆ ಬಣಕಲ್ ಮಾರ್ಗವಾಗಿ ಬರುತ್ತದೆ. ರಿಜ್ವಾನ್ ರವರ ಮನೆಯಿಂದ ನನ್ನ ಮನೆಗೆ ತೆರಳಲು ಮೂಡಿಗೆರೆಯ ಮಾರ್ಗವಾಗಿ ಬರಬೇಕು ಎಂದರೆ ಸರಿ. ನಾನು ಚಾಸಾ-2 ರವರ ಮನೆಯ ಬಳಿ ಸುಮ್ಮನೆ ತೆರಳಿರುತ್ತೇನೆ. ನನ್ನನ್ನು ಆ ದಿನ ಚಾಸಾ-3 ರವರೇ ಚಾಸಾ-1 ರವರ ಮನೆಯ ಬಳಿ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ರಿಜ್ವಾನ್ ರವರ ಮನೆಯಿಂದ ಚಾಸಾ-2 ರವರ ಮನೆಗೆ ಸುಮಾರು ಅರ್ಧ ಗಂಟೆಗಳ ಕಾಲವಾಗುತ್ತದೆ.

ನಿಪಿ-2 ನ್ನು ನಾನು ಹೋಗುವ ಪೂರ್ವದಲ್ಲಿ ಪೋಲಿಸರು ಬರೆದಿರುತ್ತಾರೆ, ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ನಿಪಿ-2 ನ್ನು ಎಷ್ಟು ಪುಟವಾಗಿ ಬರೆದಿರುತ್ತಾರೆ ಎಂಬ ಮಾಹಿತಿ ನನಗೆ ತಿಳಿದಿರುವುದಿಲ್ಲ. ನಿಪಿ-2 ಕ್ಕೆ ನಾನು ಮತ್ತು ಚಾಸಾ-5 ರವರು ಸಹಿ ಮಾಡಿರುತ್ತೇವೆ. ನಾನು ಮತ್ತು ಚಾಸಾ-5 ರವರು ಒಟ್ಟಿಗೆ ಸ.5.30 ರಿಂದ 6.00 ಸಮಯದಲ್ಲಿ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-2 ರಲ್ಲಿ ಏನನ್ನು ಬರೆಯಲಾಗಿದೆ ಎಂದು ಪೋಲಿಸರು ಓದಿ ತಿಳಿಸಿರುವುದಿಲ್ಲ. ನಿಪಿ-3 ಮತ್ತು 4 ನ್ನು ಯಾರು ತೆಗೆದಿರುತ್ತಾರೆ ಮತ್ತು ಯಾವ ವಿಷಯಕ್ಕೆ ತೆಗೆದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಪೋಲಿಸರು ಫೋಟೋವನ್ನು ತೆಗೆಯಲು ನಿಲ್ಲುವಂತೆ ಸೂಚಿಸಿದ ಮೇರೆಗೆ ನಾನು ನಿಂತಿರುತ್ತೇನೆ. ಎಂ.ಒ.1 ನ್ನು ಯಾರು, ಎಲ್ಲಿಂದ ತಂದಿರುತ್ತಾರೆ ಎಂಬುದರ ಮಾಹಿತಿ ನನಗಿರುವುದಿಲ್ಲ. ಎಂ.ಒ.1 ಚಾಸಾ-2 ರವರ ಕುಲುಮೆ ಕೆಲಸದಲ್ಲಿ ಮಾಡಿರುವ ಕತ್ತಿ ಎಂದರೆ ಸರಿ. ಈ ದಿನ ನ್ಯಾಯಾಲಯಕ್ಕೆ ನಾನು ಚಾಸಾ-3 ರವರೊಟ್ಟಿಗೆ ಬಂದಿರುತ್ತೇನೆ ಎಂದರೆ ಸರಿ. ಅವರು ಹೇಳಿಕೊಟ್ಟಂತೆ ನಾನು ಈ ದಿನ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.**,** ಮೂಡಿಗೆರೆ.